

ತಮಟೆ ಕಲಿಕೆ ಶಿಬಿರದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದ ಮಕ್ಕಳು

# ತೇಜಸ್ವಿಯ ‘ಭೀಮಶಾಲೆ’

**ಹುಟ್ಟೂರಿನ ಬದುಕಿನ ಚಿತ್ರಣಗಳನ್ನೇ ತಮ್ಮ ಕಿರುಚಿತ್ರಗಳಿಗೆ ಫ್ರೇಮ್ ಆಗಿಸಿಕೊಂಡವರು ನವೀನ್ ತೇಜಸ್ವಿ. ಮಣ್ಣಿಗೆ ಮರಳಿ ಕೊಡುಗೆ ನೀಡುವ ಅವರ ಹಂಬಲ ‘ಭೀಮಶಾಲೆ’ಯ ರೂಪದಲ್ಲಿ ಸಾಕಾರಗೊಂಡಿದೆ.**

**■ ಸುಮಲತಾ ಎನ್.**

‘ನನ್ನನ್ನು ಯಾವಾಗಲೂ ಅಚ್ಚರಿಗೊಳಿಸುವುದು ನನ್ನೂರು. ನನ್ನೂರಿನ ಜನರು, ಅವರ ಜೀವನಪ್ರೀತಿ ನನ್ನನ್ನು ಬಹುವಾಗಿ ಸೆಳೆಯುವ ಅಂಶಗಳು. ಏನೆಲ್ಲಾ ಒದ್ದಾಟವಿದ್ದರೂ, ಸೌಲಭ್ಯಗಳಿಲ್ಲದೆ ತತ್ತರಿಸುತ್ತಿದ್ದರೂ ಅವರ ಜೀವನಪ್ರೀತಿ ಎಂದಿಗೂ ಕುಂದಿಲ್ಲ. ಬದುಕಿನ ಹೋರಾಟಗಳ ನಡುವೆಯೂ ತಮ್ಮ ಮಕ್ಕಳಿಗೆ ಒಳ್ಳೆಯ ಭವಿಷ್ಯ ಕಟ್ಟಿಕೊಡಬೇಕೆಂಬ ಅತೀವ ಹಂಬಲವಿರುವ ಆ ಜೀವನಪ್ರೀತಿ ನನಗೆ ತುಂಬಾ ಆಕರ್ಷಕವಾಗಿ ಕಾಣುತ್ತದೆ…’

ಈಚೆಗೆ ‘ಟೋಟೊ ಪ್ರಶಸ್ತಿ’ ಪಡೆದ ಕನ್ನಡದ ಹುಡುಗ ನವೀನ್ ತೇಜಸ್ವಿ ಅವರ ಮಾತಿನುದ್ದಕ್ಕೂ ಅವರ ನೆಲದೆಡೆಗಿನ ಪ್ರೀತಿ ಎದ್ದು ಕಾಣುತ್ತದೆ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಹೊಸಬಾಳೆ ಎಂಬ ಅರೆ ಮಲೆನಾಡಿನ ಪ್ರತಿಭೆ ನವೀನ್ ತೇಜಸ್ವಿ ಅವರ ‘ಸುರಗಿ’ ಹಾಗೂ ‘ಬಂಗಾರ ಕಡ್ಡಿ ಡೇರೆ ಹೂವು’ ಎಂಬ ಸಣ್ಣಕಥೆಗಳಿಗೆ ಸೃಜನಶೀಲ ಬರಹಕ್ಕಾಗಿ ಟೋಟೊ ಪ್ರಶಸ್ತಿ ಸಂದಿದೆ. ತಮ್ಮ ಪ್ರೀತಿಯ ಹುಟ್ಟೂರಿನಲ್ಲಿ ಸಣ್ಣದೊಂದು ಕಲಾಶಾಲೆ ತೆರೆದುದಕ್ಕೂ ಅದೇ ಮುನ್ನುಡಿಯಾಗಿದೆ. ಈ ಕಲಾಶಾಲೆ ತೆರೆಯುವ ಹಿಂದೆ ಪುಟ್ಟದೊಂದು ಕಥೆಯೂ ಅಡಗಿದೆ.

‘ನಮ್ಮೂರಿನಲ್ಲಿ ನಾನು ಮೊದಲ ತಲೆಮಾರಿನ ವಿದ್ಯಾರ್ಥಿ. ವಿಜ್ಞಾನಿ ಆಗುವ ಉದ್ದೇಶ ಹೊತ್ತು






ಬೆಂಗಳೂರಿನ ಸೇಂಟ್ ಜೋಸೆಫ್ಸ್ ಕಾಲೇಜಿಗೆ ಸೇರಿದೆ. ಪದವಿಗೆ ಕಾಲಿಡುತ್ತಿರುವ ಊರಿನ ಮೊದಲ ತಲೆಮಾರಿನ ವಿದ್ಯಾರ್ಥಿ ಎಂಬ ಹೆಗ್ಗಳಿಕೆ ಒಂದು ಕಡೆ, ಮುಂದಿನ ದಾರಿಯ ಆತಂಕ ಮತ್ತೊಂದೆಡೆ. ಕಾಲೇಜು ಸೇರಿದ ನನಗೆ ಇಂಗ್ಲಿಷ್ ದೊಡ್ಡ ಸಮಸ್ಯೆಯಾಗಿತ್ತು. ಹೇಗಾದರೂ ಮಾಡಿ ಇಂಗ್ಲಿಷ್ ಕಲಿಯಲೇಬೇಕೆಂದು ಇಂಗ್ಲಿಷ್ ನ್ಯೂಸ್ ಚಾನಲ್, ಸಿನಿಮಾ ನೋಡಲು ಆರಂಭಿಸಿದೆ. ಭಾಷೆ ಜೊತೆಗೆ, ಗೊತ್ತೇ ಆಗದೆ ಸಿನಿಮಾದೆಡೆಗೆ ಸೆಳೆತ ಶುರುವಾಗಿತ್ತು. ಊರಲ್ಲಿದ್ದಾಗ ಕಥೆ, ಕವನಗಳನ್ನು ಬರೆಯುತ್ತಿದ್ದುದು, ಪುಸ್ತಕಗಳನ್ನು ಓದುತ್ತಿದ್ದುದು, ಜೊತೆಗೆ ನನ್ನೂರಿನ ಪರಿಸರದ ನೆನಪು ಆಸಕ್ತಿ ಹೆಚ್ಚಿಸಿತ್ತು. ವಿಜ್ಞಾನಕ್ಕಿಂತ ಕಲೆ ನನ್ನ ಕೈಹಿಡಿಯಬಲ್ಲದು ಎನಿಸಿತು…’– ತಮ್ಮ ಹಿನ್ನೆಲೆಯನ್ನು ಪುಟ್ಟದಾಗಿ ತೆರೆದಿಟ್ಟರು ನವೀನ್.

ಕಾಲೇಜಿನ ರಂಗತಂಡದಲ್ಲಿ ಸಕ್ರಿಯರಾಗಿದ್ದ ನವೀನ್ ಅವರಿಗೆ ‘ಫೋಟೊಗ್ರಫಿ’ ಕೂಡ ಜೊತೆಯಾಗಿತ್ತು. ಪಾರ್ಟ್ ಟೈಂ ಕೆಲಸ ಮಾಡಿ ಉಳಿದ ಹಣದಲ್ಲಿ ಸೆಕೆಂಡ್ ಹ್ಯಾಂಡ್ ಕ್ಯಾಮೆರಾ ಖರೀದಿಸಿ ತೆಗೆದ ‘ಬೀದಿ ಚಿತ್ರಗಳು’ ಬಲು ಖುಷಿಕೊಟ್ಟವು. ಬದುಕಿನ ಹಲವು ಆಯಾಮಗಳನ್ನು ತೆರೆದಿಟ್ಟವು. ಕ್ರಿಯಾತ್ಮಕ ಆಲೋಚನೆಗಳಿಗೂ ರೆಕ್ಕೆ ಕಟ್ಟಿದ್ದವು.

ಪದವಿ ಮುಗಿಯುವ ಹೊತ್ತಿಗೆ ವಿಜ್ಞಾನದ ಹಾದಿ